ಶ್ರೀ ಎಂ. ವಿ. ಕೃಷ್ಣಪ್ಪ.—ಪಶು ವೈದ್ಯ ಶಾಲೆ ಅವಶ್ಯಕತೆ ಇದೆಯೆಂದು ಅವರು ವೈಯುಕ್ತಿಕವಾಗಿ ಕೇಳುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಲ್ಲಿಯ ಗ್ರಾಮ ಪಟೇಲರು ಹಣ ಡಿಪಾಸಿಟ್ ಮಾಡಿ ಹತ್ತಾರು ವರ್ಷಗಳಾಗಿದ್ದರೂ ಕೂಡ ಆಸ್ಪತ್ರೆ ಕೊಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—25 ಸಾವಿರ ದನಗಳಿಗೆ ಒಂದು ಪಶು ವೈದ್ಯ ಶಾಲೆ ಮಾಡ ಮಾಡಬೇಕೆಂದು ಇದೆ. ಈಗ ತಿಪಟೂರು ತಾಲ್ಲೂಕಿನಲ್ಲಿ ಮೂರು ಪಶು ವೈದ್ಯ ಶಾಲೆಗಳಿವೆ. ಬೇರೆ ತಾಲ್ಲೂಕಿನಲ್ಲಿ 40-50 ಸಾವಿರ ದನಗಳಿದ್ದರೂ ಕೂಡ ಆಸ್ಪತ್ರೆ ಇಲ್ಲ. ಯಾವ ತಾಲ್ಲೂಕಿನಲ್ಲಿ 25 ಸಾವಿರಕ್ಕಿಂತ ಹೆಚ್ಚು ಪಶುಗಳಿವೆಯೋ ಅಲ್ಲಿ ಕೊಟ್ಟು ಆ ಮೇಲೆ ಇಲ್ಲಿಗೆ ಬರಬೇಕಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—1967-68ನೇ ವರ್ಷದ ಕಾರ್ಯಕ್ರಮದಲ್ಲಿ ಸೇರಿಸಲು ಯೋಚನೆ ಮಾಡುತ್ತೇವೆಂದು ಹೇಳಿದ್ದೀರಿ. ಅದರೆ ಆಗ್ಗೆ ತಾವು ಯಾರೂ ಇಲ್ಲಿ ಇರುವುದಿಲ್ಲ. ತಾವು ಹೋಗುವುದರೊಳಗಾಗಿ ಸ್ಯಾಂಕ್ಷನ್ ಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನರಕಾರ ಹೋಗುವ ಮಾತೇ ಇಲ್ಲ. ನರಕಾರ ಯಾವಾಗಲೂ ಇರುತ್ತದೆ.

———

Telegraph and Telephone Facilities to Y. N. Hoskote.

*Q.—422. Sri R. KENCHAPPA (Pavagada).—

Will the Government be pleased to state:—

(*a*) when representations were received by Government for providing telegraph and telephone facilities to Y. N. Hoskote, in Pavagada Taluk;

(*b*) whether it has come to their notice that the said village is not only an important Hobli Centre in the Taluk but also having trade contact outside;

(*c*) whether they would request the concerned department to convert Pavagada Centre into an exchange and have direct connection from Pavagada to Bangalore *via* Tumkur early ?

A.—Sri G. B. SHANKAR RAO (Parliamentary Secretary to the Minister for Public Works).—

(*a*) In March 1962.

(*b*) Yes.

(*c*) Yes. A public call office will be opened at Pavagada after commissioning of the proposed automatic telephone exchange at Pavagada. Pavagada exchange will initially work into Hindupur. Provision of direct outlets would be considered subsequently if justified by traffic considerations.

ಶ್ರೀ ಆರ್. ಕೆಂಚಪ್ಪ.—ಪ್ರಾರಂಭದಲ್ಲಿ ಪಾವಗಡ ಎಕ್ಸ್‌ಚೆಂಜು ಹಿಂದೂಪುರ ಜೊತೆಗೆ ಕೆಲಸ ನಿರ್ವಹಿಸುತ್ತದೆ ಎಂದು ಹೇಳಿದ್ದೀರಿ. ಇದರಿಂದ ಸಾರ್ವಜನಿಕರಿಗೆ ಜೆಲಫೋನ್ನು ಮತ್ತು ತಂತೀ ಸೌಲಭ್ಯ ಸರಕಾರದಲ್ಲಿ ಒದಗದೇ ಅನಾನುಕೂಲವಾಗುವ ಸಂಭವ ಇದೆ ಎಂಬುದು ನರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಪಾವಗಡಕ್ಕೆ ಒಂದು ಆಟೋಮ್ಯಾಟಿಕ್ ಜೆಲಫೋನ್ ಎಕ್ಸ್‌ಚೇಂಜ್ ಕೊಡಬೇಕೆಂದು ಈಗ ಪೋಸ್ಟ್ ಅಂಡ್ ಟೆಲಿಗ್ರಾಫ್ ಡಿಪಾರ್ಟ್‌ಮೆಂಟಿನವರು ನಿರ್ಣಯಿಸಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ನರಕಾರ ಟೆಲಿಫೋನು ಎಕ್ಸ್‌ಚೇಂಜ್ ಮಂಜೂರು ಮಾಡತಕ್ಕ ವಿಚಾರದಲ್ಲಿ ಅನುಸರಿಸತಕ್ಕಂಥ ಟೆಲಿಫೋನು ಇಲಾಖೆಯ ನೀತಿ ಏನು ?

Sri G. B. SHANKAR RAO.—Post and Telegraph Department have got their own programme. According to it, they sanction Automatic Exchanges.

Collection of Phodi Fees

*Q.—366. Sri N. NANJE GOWDA (Krishnarajpet).—

Will the Government be pleased to state:—

(*a*) the number of persons from whom phodi fees have been collected by the Office of the Sub-Registrar, Krishnarajpet Taluk, together with survey Nos. for which the fees have been so collected from 1st January 1963 to 1st January 1964;

(*b*) the survey numbers which were surveyed and phodi affected and the number of persons whose lands were surveyed and phoded during the abovesaid period ?

A.—Sri M. V. KRISHNAPPA (Minister for Revenue).—

(*a*) Phodi fees has been collected from 1,173 persons in respect of 1,477 survey numbers.

(*b*) 409 survey numbers involving 751 persons were surveyed and phodi affected during the period from 1st January 1963 to 1st January 1964.

ಶ್ರೀ ಎನ್. ನಂಜೇಗೌಡ.—ಉತ್ತರ (ಎ)ನಲ್ಲಿ 1477 ಸರ್ವೆ ನಂಬರುಗಳ ಸಂಬಂಧದಲ್ಲಿ 1173 ವ್ಯಕ್ತಿಗಳಿಂದ ಫೋಡು ಶುಲ್ಕ ವಸೂಲ್ಮಾಡಲಾಗಿದೆ ಎಂದು ಉತ್ತರ ಹೇಳಿದೆ. ಇದರಲ್ಲಿ 409 ಸರ್ವೇ ನಂಬರುಗಳ ಬಗ್ಗೆ ಸರ್ವೆ ಮಾಡಿ ಫೋಡು ಮಾಡಲಾಯಿತು ಎಂದು ಹೇಳಿದೆ. ಉಳಿದ ಸರ್ವೇ ನಂಬರುಗಳ ಬಗ್ಗೆ ಮಾಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿ ಸಿಬ್ಬಂದಿ ಕಡಿಮೆಯಾಗಿಬಿಟ್ಟಿರುವುದರಿಂದ ಕೆಲಸ ನಿಧಾನವಾಗಿದೆ. ಸರ್ವೇ ಸೆಟಲ್‌ಮೆಂಟ್ ಕೆಲಸ ಮುಗಿದಿದೆ. ಸಪ್ಲೈಸ್ ಸ್ಟಾಫ್ ಫುಡ್ ಕೆಲಸಕ್ಕೆ ತೆಗೆದುಕೊಂಡಿದೆ. ಈ ಕೆಲಸ up to date ಮಾಡುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ಈ ತಾಲ್ಲೂಕಿನಲ್ಲಿ ಫೋಡು ಕೆಲಸ ನಿಂತುಹೋಗಿರುವುದು ನಿಜ.

ಶ್ರೀ ಟಿ. ಮಾದಯ್ಯಗೌಡ.—ಸ್ವಾಮಿ, ಈ ಫೋಡಿನ ಕೆಲಸವಾಗದೆ ಬಾವಿ ತೆಗೆಯತಕ್ಕಂಥ ಸಾಲ ಮಗ್ಯೆರೆ ಕೇಳಿದರೆ, ರೆಕಾರ್ಡುಗಳು ಇಲ್ಲದೆ ಸಾಲ ಕೊಡುವುದಿಲ್ಲ ಎಂದು ಹೇಳುತ್ತಾರೆ. ಈ ಕೆಲಸ ಆದಷ್ಟು ಬೇಗ ಆಗುವಂತೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು, ತೊಂದರೆಯಾಗಿರುವುದು ನಿಜ, ಸರ್ಕಾರದವರು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಸರ್‌ಪ್ಲಸ್ ಸ್ಟಾಫ್ ಉಪಯೋಗಿಸಿಕೊಂಡು ಫೋಡಿನ ಕೆಲಸವನ್ನು ಜಾಗ್ರತೆ ಮಾಡಿಸುತ್ತೇವೆ. ಆ ಕೆಲಸವನ್ನು ತೀವ್ರತೆಯಿಂದ ಮಾಡುತ್ತಿದ್ದೇವೆ.

ಶ್ರೀ ಎನ್. ನಂಜೇಗೌಡ.—ಜಮೀನುಗಳಿಗೆ ಪಂಪ್‌ಸೆಟ್ಟು ಹಾಕಿಕೊಂಡು ಪವರನ್ನು ಸ್ಯಾಂಕ್ಷನ್ ಮಾಡಬೇಕಾದರೆ ಸ್ವಂತ ಜಮೀನು ಎಲ್ಲದೆ ಎಂದು ಹೇಳಿದನಂತರ ಒಪ್ಪಿಗೆ ಕೊಡಬೇಕು. ಬೇರೆಯವರ ಹೆಸರಿನಲ್ಲಿ ಜಮೀನು ಇರುವುದರಿಂದ ಸಂಬಂಧಪಟ್ಟ ರೆವಿನ್ಯೂ ಇಲಾಖೆಯವರು ಒಪ್ಪಿಗೆ ಕೊಡದಿರುವುದರಿಂದ ಪವರ್ ತೆಗೆದುಕೊಳ್ಳುವುದು ತಡವಾಗಿದೆ, ಇದನ್ನು ಆದಷ್ಟು ಬೇಗನೆ ಮಾಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?